**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಜಿಎಂ\3236\2019 | ಡಿ.2-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:26/05/2020

**ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ**

**ವಿಷಯು:** ಸರ್ಕಾರಿ ನೌಕರರಾದ ಹಾವೇರಿ ಜಿಲ್ಲೆ ಹೆಸ್ಕಾಂ ಕಾಮಗಾರಿ ಘಟಕದ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಕಿರಿಯ ಅಭಿಯಂತರ (ವಿದ್ಯುತ್) ಆದ ಶ್ರೀ.ಮಹದೇವಪ್ಪ ಸಣ್ಣಪ್ಪ ಕುಮ್ಮೂರ ರವರ ವಿರುದ್ಧದ ದುರ್ನಡತೆಯ ಬಗ್ಗೆ.

******

ದಾವಣಗೆರೆಯ ವಿನೋಭನಗರ 3ನೇ ಮುಖ್ಯ, 3ನೇ ಕ್ರಾಸ್‌ನ ನಿವಾಸಿಯಾದ ಶ್ರೀ.ಸಾಗರ್.ಪಿ ಬಿನ್ ಪ್ರಕಾಶ್ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಹಾವೇರಿ ಜಿಲ್ಲೆ ಹೆಸ್ಕಾಂ ಕಾಮಗಾರಿ ಘಟಕದ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಕಿರಿಯ ಅಭಿಯಂತರ (ವಿದ್ಯುತ್) ಆದ ಶ್ರೀ.ಮಹದೇವಪ್ಪ ಸಣ್ಣಪ್ಪ ಕುಮ್ಮೂರ (ಇನ್ನು ಮುಂದೆ, 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಎದುರುದಾರರು ತಮ್ಮ ಪತ್ನಿ ಮತ್ತು ಸಂಬಂಧಿಗಳ ಹೆಸರಿನಲ್ಲಿ ಅಕ್ರಮ ಆಸ್ತಿ ಗಳಿಸಿದ್ದಾರೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನ ಆಪಾದನೆಯನ್ನು ಅಲ್ಲಗಳೆದಿದ್ದಾರೆ.

4. ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾವೇರಿ (ಇನ್ನು ಮುಂದೆ 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರಿಗೆ ದೂರಿನ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿ, ಸದರಿಯವರು ತಮ್ಮ ವರದಿಯಲ್ಲಿ –

1) ಎದುರುದಾರರು ದಿ:24/03/1986ರಂದು ಆಪರೇಟರ್ ಆಗಿ ಸರ್ಕಾರಿ ಸೇವೆಗೆ ಸೇರ್ಪಡೆಗೊಂಡಿದ್ದಾರೆ;
2) ಹಾವೇರಿ ತಾಲ್ಲೂಕ್ ಚಿಕ್ಕಲಿಂಗದಹಳ್ಳಿ ಗ್ರಾಮದ ರಿ.ಸರ್ವೆ ನಂ.17/1+2ಕ, 17/1+2ಬ/2, 115/8, 115/23, 22/6 ಮತ್ತು 23/2ರಲ್ಲಿ ಒಟ್ಟು 06 ಎಕರೆ 30 ಗುಂಟೆ ಜಾಗವು ಕುಟುಂಬ ಪಾಲು ವಿಭಾಗದಲ್ಲಿ ಎದುರುದಾರರು ಹಾಗೂ ಅವರ ಅಣ್ಣ–ತಮ್ಮಂದಿರಿಗೆ ಜಂಟಿಯಾಗಿ ಬಂದಿದೆ;
3) ಹಾವೇರಿ ತಾಲ್ಲೂಕ್ ಚಿಕ್ಕಲಿಂಗದಹಳ್ಳಿ ಗ್ರಾಮದ ರಿ.ಸರ್ವೆ ನಂ.8/2ಬ, ಪ್ಲಾಟ್ ನಂ.8 ವಿಸ್ತೀರ್ಣ 0.03.05.75 ಗುಂಟೆ ಜಾಗವನ್ನು ದಿ:30/03/1998ರಂದು ₹34,000/–ಗಳಿಗೆ ಮತ್ತು ರಿ.ಸರ್ವೆ ನಂ.8/2ಬ, ಪ್ಲಾಟ್ ನಂ.5 ವಿಸ್ತೀರ್ಣ 0.02.11.25 ಗುಂಟೆ ಜಾಗವನ್ನು ದಿ:07/01/02ರಂದು ₹20,000/–ಗಳಿಗೆ ಎದುರುದಾರರು ಶ್ರೀ.ಮಹದೇವಯ್ಯ ಬಸವಣ್ಣಯ್ಯ ಮಠದ ರವರಿಂದ ಖರೀದಿಸಿದ್ದಾರೆ;
4) ದಾವಣಗೆರೆ ನಗರಸಭೆ ವ್ಯಾಪ್ತಿಯ ರಿ.ಸರ್ವೆ ನಂ.128/9ರ ಪೈಕಿ ನಿವೇಶನ ಸಂಖ್ಯೆ:ಹೆಚ್–6 ವಿಸ್ತೀರ್ಣ 18.6x50 ಅಡಿಗಳು ಮತ್ತು ಹೆಚ್–7 ವಿಸ್ತೀರ್ಣ 30+39.6/2x50 ಅಡಿಗಳ 2 ನಿವೇಶನಗಳನ್ನು ಎದುರುದಾರರು ಹಾಗೂ ಅವರ ಸಹೋದರರು ದಿ:10/05/06ರಂದು ₹1,83,000/–ಗಳಿಗೆ ಶ್ರೀ.ಕುಮಾರಸ್ವಾಮಿ.ಕೆ.ಸಿ ರವರಿಂದ ಖರೀದಿಸಿದ್ದಾರೆ;
5) ಹಾವೇರಿ ತಾಲ್ಲೂಕ್ ಚಿಕ್ಕಲಿಂಗದಹಳ್ಳಿ ಗ್ರಾಮದ ರಿ.ಸರ್ವೆ ನಂ.8/2ಬ, ಪ್ಲಾಟ್ ನಂ.5ರಲ್ಲಿ ಮನೆ ನಿರ್ಮಿಸಲು 2011ರಲ್ಲಿ ಎಸ್‌ಬಿಐ, ಹಾವೇರಿ ಯಲ್ಲಿ ₹9,40,000/–ಗಳ ಗೃಹ ಸಾಲ ಪಡೆದು ಮನೆ ನಿರ್ಮಿಸಿದ್ದಾರೆ;
6) ಎದುರುದಾರರು ತಮ್ಮ ಹೆಸರಿನಲ್ಲಿ ಹೀರೋ ಕಂಪನಿಯ ದ್ವಿಚಕ್ರ ವಾಹನ ಸಂಖ್ಯೆ:ಕೆಎ 27 ಇಎ 0298 ₹51,000/–ಗಳಿಗೆ ಖರೀದಿಸಿದ್ದಾರೆ;
7) ಎದುರುದಾರರು ತಮ್ಮ ಹೆಸರಿನಲ್ಲಿ ಹುಂಡೈ ಕಂಪನಿಯ ಐ20 ಕಾರ್ ಸಂಖ್ಯೆ:ಕೆಎ 27 ಎನ್ 1485ನ್ನು ₹8,47,469/–ಗಳಿಗೆ ಖರೀದಿಸಿದ್ದು, ಅದರ ಪೈಕಿ ಎಸ್‌ಬಿಐ, ಪಿಬಿ ಶಾಖೆ, ಹುಬ್ಬಳ್ಳಿಯಲ್ಲಿ ₹6 ಲಕ್ಷ ಸಾಲ ಹಾಗೂ ಉಳಿದ ಹಣವನ್ನು ನಗದು ರೂಪದಲ್ಲಿ ಪಾವತಿಸಿದ್ದಾರೆ;
8) ಎದುರುದಾರರು ಹಾವೇರಿ ತಾಲ್ಲೂಕ್ ಗುತ್ತಲ ಪಟ್ಟಣ ಪಂಚಾಯತ್‌ಗೆ ಸೇರಿದ ಆಸ್ತಿ ಸಂಖ್ಯೆ:2880 ಮತ್ತು 2887 ವಿಸ್ತೀರ್ಣ ತಲಾ 01 ಗುಂಟೆ 01 ಅಣೆ ಜಾಗವನ್ನು 2002ರಲ್ಲಿ ₹32,000/–ಗಳಿಗೆ ಖರೀದಿಸಿ, ನಂತರ ದಿ:13/06/14ರಂದು ಶ್ರೀಮತಿ.ಪ್ರೇಮಾ ಕೋಂ ಗುಡ್ಡಪ್ಪ ಅಂಗೂರ ರವರಿಗೆ ₹1,42,000/–ಗಳಿಗೆ ಮಾರಾಟ ಮಾಡಿದ್ದಾರೆ;
9) ಹಾವೇರಿ ತಾಲ್ಲೂಕ್ ಚಿಕ್ಕಲಿಂಗದಹಳ್ಳಿ ರಿ.ಸರ್ವೆ ನಂ.8/2ಬಿ ರಲ್ಲಿ ಪ್ಲಾಟ್ ನಂ.15 (ವಿಸ್ತೀರ್ಣ 0.02.11.25 ಗುಂಟೆ) ಮತ್ತು ಪ್ಲಾಟ್ ನಂ.18 (ವಿಸ್ತೀರ್ಣ 0.02.11.25 ಗುಂಟೆ) ಎದುರುದಾರರು ಮತ್ತು ಅವರ ಸಹೋದರರಿಗೆ ಪಿತ್ರಾರ್ಜಿತವಾಗಿ ಬಂದಿದೆ ಎಂದು ಹೇಳಿದ್ದಾರೆ.

5. ತನಿಖಾ ವರದಿಯೊಂದಿಗೆ ಹಾಜರುಪಡಿಸಿದ ದಾಖಲೆಗಳು –

BSm/3236/19



1) 2018ನೇ ಸಾಲಿನ ಚರ ಮತ್ತು ಸ್ಥಿರಾಸ್ತಿಯ ಪಟ್ಟಿ;
2) ಕುಟುಂಬದ ಜಮೀನುಗಳ ಪಾಲು ವಿಭಾಗ ಪತ್ರ [ದಸ್ತಾವೇಜು ಸಂಖ್ಯೆ:1616/18–19, ದಿ:03/07/18];
3) ದಿ:30/03/98ರ ನೋಂದಾಯಿತ ಕ್ರಯ ಪತ್ರ [ದಸ್ತಾವೇಜು ಸಂಖ್ಯೆ:2311/97–98];
4) ದಿ:07/01/02ರ ನೋಂದಾಯಿತ ಕ್ರಯ ಪತ್ರ [ದಸ್ತಾವೇಜು ಸಂಖ್ಯೆ:2756/01–02];
5) ದಿ:10/05/06ರ ನೋಂದಾಯಿತ ಕ್ರಯ ಪತ್ರ [ದಸ್ತಾವೇಜು ಸಂಖ್ಯೆ:1323/06–07];
6) ಎದುರುದಾರರ ವಾಸದ ಮನೆಯ ಭಾವಚಿತ್ರಗಳ ಪ್ರತಿಗಳು;
7) ಕೆಎ 27 ಇಎ 0298 ವಾಹನದ ಬಿ–ವಹಿಯ ಪ್ರತಿ;
8) ಕೆಎ 27 ಎನ್ 1485 ವಾಹನದ ಬಿ–ವಹಿಯ ಪ್ರತಿ;
9) ದಿ:13/06/14ರ ನೋಂದಾಯಿತ ಕ್ರಯ ಪತ್ರ [ದಸ್ತಾವೇಜು ಸಂಖ್ಯೆ:1081/14–15];
10) ಆಸ್ತಿ ಸಂಖ್ಯೆ:2880ರ 2019–20ರ ಕರ ಆಕರಣೆ ಪ್ರತಿ;
11) ಆಸ್ತಿ ಸಂಖ್ಯೆ:2887ರ 2019–20ರ ಕರ ಆಕರಣೆ ಪ್ರತಿ;
12) ದಿ:08/03/02ರ ನೋಂದಾಯಿತ ಕ್ರಯ ಪತ್ರ [ದಸ್ತಾವೇಜು ಸಂಖ್ಯೆ:3119/01–02];
13) ದಿ:24/03/86 ರಿಂದ 30/11/19 ರವರೆಗಿನ ಎದುರುದಾರರ ವೇತನ ವಿವರಣಾ ಪಟ್ಟಿ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಈ ಕೆಳಗೆ ಹೇಳಿದ ದಾಖಲೆಗಳಿವೆ –

1) ಮೇಲಿನ ಖಂಡಿಕೆ–4(2)ರ ಸ್ವತ್ತುಗಳು ಎದುರುದಾರರು ಮತ್ತು ಅವರ ಇಬ್ಬರು ಸಹೋದರರುಗಳಿಗೆ ಕುಟುಂಬದ ಪಾಲು ವಿಭಾಗ ಪತ್ರ [ದಸ್ತಾವೇಜು ಸಂಖ್ಯೆ:1616/18–19, ದಿ:03/07/18]ದಲ್ಲಿ ಬಂದಿದೆ;
2) ಮೇಲಿನ ಖಂಡಿಕೆ–4(3)ರ ಎರಡು ಸ್ವತ್ತುಗಳನ್ನು ಎದುರುದಾರರೇ ಸ್ವತಃ ಕ್ರಮವಾಗಿ, ದಿ:30/03/1998ರ ಕ್ರಯ ಪತ್ರ [ದಸ್ತಾವೇಜು ಸಂಖ್ಯೆ:2311/97–98, ಕ್ರಯದ ಮೌಲ್ಯ ₹34,000/–] ಮತ್ತು 07/01/2002ರ ಕ್ರಯ ಪತ್ರ [ದಸ್ತಾವೇಜು ಸಂಖ್ಯೆ:2756/01–02, ಕ್ರಯದ ಮೌಲ್ಯ ₹20,000/–] ರಲ್ಲಿ ಖರೀದಿಸಿದೆ;
3) ಮೇಲಿನ ಖಂಡಿಕೆ–4(4)ರ ಎರಡು ನಿವೇಶನಗಳನ್ನು ಎದುರುದಾರರು ಮತ್ತು ಅವರ ಇಬ್ಬರು ಸಹೋದರರು ದಿ:10/05/2006ರ ಕ್ರಯಪತ್ರ [ದಸ್ತಾವೇಜು ಸಂಖ್ಯೆ:1323/06–07, ಕ್ರಯದ ಮೌಲ್ಯ ₹1,83,000/–] ದಲ್ಲಿ ಖರೀದಿಸಿದೆ;
4) ಮೇಲಿನ ಖಂಡಿಕೆ–4(8)ರ ಎರಡು ಪ್ಲಾಟ್‌ಗಳನ್ನು 2002ನೇ ಇಸವಿಯಲ್ಲಿ ₹32,000/– ಖರೀದಿಸಿ, ಸದರಿ ಎರಡು ಪ್ಲಾಟ್‌ಗಳನ್ನು ದಿ:13/06/14ರ ಕ್ರಯ ಪತ್ರ [ದಸ್ತಾವೇಜು ಸಂಖ್ಯೆ:1081/14–15] ದಲ್ಲಿ ಶ್ರೀಮತಿ.ಪ್ರೇಮಾ ಕೋಂ ಗುಡ್ಡಪ್ಪ ಅಂಗೂರ ರವರಿಗೆ ₹1,42,000/–ಗಳಿಗೆ ಮಾರಾಟ ಮಾಡಿದೆ;
5) ಮೇಲಿನ ಖಂಡಿಕೆ–4(9)ರ ಎರಡು ಪ್ಲಾಟ್‌ಗಳನ್ನು ಎದುರುದಾರರ ತಂದೆ ಶ್ರೀ.ಸಣ್ಣಪ್ಪ ಬಿನ್ ಹೊನ್ನಪ್ಪ ಕುಮ್ಮೂರು ರವರು ₹38,000/–ಗಳಿಗೆ ದಿ:08/03/2002ರ ಕ್ರಯ ಪತ್ರ [ದಸ್ತಾವೇಜು ಸಂಖ್ಯೆ:3119/01–02] ದಲ್ಲಿ ಖರೀದಿಸಿದ್ದು, ಸದರಿ ಎರಡು ಪ್ಲಾಟ್‌ಗಳು ಹಾಲೀ ಎದುರುದಾರರು ಮತ್ತು ಅವರ ಸಹೋದರರಿಗೆ ಪಿತ್ರಾರ್ಜಿತವಾಗಿ ಬಂದಿದೆ;
6) ಮೇಲಿನ ಖಂಡಿಕೆ–4(3), 4(4) ಮತ್ತು 4(8) ರಲ್ಲಿ ಹೇಳಿದ ಸ್ಥಿರ ಸ್ವತ್ತುಗಳನ್ನು ಎದುರುದಾರರು ಸರ್ಕಾರಿ ಸೇವೆಗೆ ಸೇರದಿ ನಂತರ ಅರ್ಜನೆ\ ಮಾರಾಟ ಮಾಡಿದ್ದಾರೆ. ಸದರಿ ಸ್ಥಿರ ಸ್ವತ್ತುಗಳನ್ನು

ಅರ್ಜಿಸುವ \ ಮಾರಾಟದ ಪೂರ್ವದಲ್ಲಿ ಎದುರುದಾರರು ಸೂಚಿತ ಪ್ರಾಧಿಕಾರದಿಂದ ಅನುಮತಿ ಪಡೆದ ದಾಖಲೆಗಳಿಲ್ಲ;

7) ಮೇಲಿನ ಖಂಡಿಕೆ–4(6) ಮತ್ತು 4(7) ರಲ್ಲಿ ಹೇಳಿದ ದ್ವಿಚಕ್ರ ವಾಹನ ಮತ್ತು ಕಾರನ್ನು ಖರೀದಿಸುವ ಪೂರ್ವದಲ್ಲಿ ಎದುರುದಾರರು ಸೂಚಿತ ಪ್ರಾಧಿಕಾರದಿಂದ ಅನುಮತಿ ಪಡೆದ ದಾಖಲೆಗಳಿಲ್ಲ;

8) ಮೇಲಿನ ಖಂಡಿಕೆ–4(2)ರಲ್ಲಿ ಹೇಳಿದ ಎರಡು ಪ್ಲಾಟ್‌ಗಳ ಪೈಕಿ ಪ್ಲಾಟ್ ನಂ.5ರಲ್ಲಿ ಎದುರುದಾರರು ಮನೆ ನಿರ್ಮಾಣ ಮಾಡಿದ್ದು, ಸದರಿ ಮನೆ ನಿರ್ಮಾಣಕ್ಕೆ 2011ರಲ್ಲಿ ಎದುರುದಾರರು ಎಸ್‌ಬಿಐ, ಹಾವೇರಿ ಶಾಖೆ ಯಲ್ಲಿ ₹9,40,000/–ಗಳ ಗೃಹ ಸಾಲವನ್ನು ಪಡೆದಿದ್ದಾರೆ. ಹಾಗೆಯೇ, ಕಾರ್ ಖರೀದಿಗೆ ₹6 ಲಕ್ಷ ಸಾಲವನ್ನು ಎಸ್‌ಬಿಐ, ಹುಬ್ಬಳ್ಳಿ ಶಾಖೆಯಿಂದ ಪಡೆದಿದ್ದಾರೆ. ಸದರಿ ಸಾಲಗಳನ್ನು ಪಡೆಯುವ ಪೂರ್ವದಲ್ಲಿ ಎದುರುದಾರರು ಸೂಚಿತ ಪ್ರಾಧಿಕಾರದಿಂದ ಅನುಮತಿ ಪಡೆದ ದಾಖಲೆಗಳಿಲ್ಲ;

9) ಎದುರುದಾರರು ಇಲಾಖಾ ಮೇಲಾಧಿಕಾರಿಗಳಿಗೆ ಸಲ್ಲಿಸಿದ 2018ನೇ ಸಾಲಿನ ಆಸ್ತಿ–ಧಾಯಿತ್ವ ಪಟ್ಟಿಯನ್ವಯ "ಚರಾಸ್ತಿಗಳು" ಖಂಡಿಕೆಯನ್ವಯ ₹6,96,000/– ಮೌಲ್ಯದ 224 ಗ್ರಾಂ ಚಿನ್ನದ ಒಡವೆಗಳನ್ನು ಹಾಗೂ ₹27,206/– ಮೌಲ್ಯದ 1549 ಗ್ರಾಂ ಬೆಳ್ಳಿಯ ಸಾಮಗ್ರಿಗಳನ್ನು ಖರೀದಿಸಿದ್ದಾರೆ. ಸದರಿ ಒಡವೆ \ ಸಾಮಗ್ರಿಗಳ ಖರೀದಿಗೆ "ಆದಾಯದ ಮೂಲ" ವನ್ನು ಅದೇ ಖಂಡಿಕೆಯಲ್ಲಿ ಎದುರುದಾರರು ಹೇಳಿದ್ದಾರೆ. ಆದರೆ, ಸದರಿ ಖಂಡಿಕೆಯಲ್ಲಿ ಹೇಳಿದ "ಆದಾಯ ಮೂಲದಲ್ಲಿ" ನಿಖರತೆ ಇಲ್ಲ;

10) ಮುಂದುವರೆದು, ಬೆಲೆ ಬಾಳುವ ವಿಗ್ರಹಗಳು ಮತ್ತು ಕಲಾತ್ಮಕ ವಸ್ತುಗಳನ್ನು ಎದುರುದಾರರು ಉಡುಗೊರೆಯಾಗಿ ಸ್ವೀಕರಿಸಿದ್ದಾರೆಂದು ಆಸ್ತಿ–ಧಾಯಿತ್ವ ಪಟ್ಟಿಯಲ್ಲಿ ಘೋಷಿಸಿಕೊಂಡಿದ್ದಾರೆ. ಅವುಗಳ ಒಟ್ಟು ಮೌಲ್ಯ ₹8,000/– ಎಂದು ಹೇಳಿದೆ. ಸದರಿ ಉಡುಗೊರೆಗಳನ್ನು ಸ್ವೀಕರಿಸುವ ಪೂರ್ವದಲ್ಲಿ ಎದುರುದಾರರು ಸೂಚಿತ ಪ್ರಾಧಿಕಾರದಿಂದ ಅನುಮತಿ ಪಡೆದ ದಾಖಲೆಗಳಿಲ್ಲ;

11) ಹಾಗೆಯೇ, ಒಟ್ಟು ₹85,500/– ಮೌಲ್ಯದ ಗೃಹಬಳಕೆಯ ವಸ್ತುಗಳನ್ನು ಎದುರುದಾರರು ಖರೀದಿಸಿರುವುದಾಗಿ ಆಸ್ತಿ–ಧಾಯಿತ್ವ ಪಟ್ಟಿಯಲ್ಲಿ ಘೋಷಿಸಿಕೊಂಡಿದ್ದಾರೆ;

12) ಎದುರುದಾರರು ಒಟ್ಟು 16 ವಿಮಾ ಪಾಲಿಸಿಗಳನ್ನು ಹೊಂದಿರುವುದಾಗಿ ಆಸ್ತಿ–ಧಾಯಿತ್ವ ಪಟ್ಟಿಯಲ್ಲಿ ಘೋಷಿಸಿಕೊಂಡಿದ್ದು, ಸದರಿ ಎಲ್ಲಾ ವಿಮಾ ಪಾಲಿಸಿಗಳನ್ನು ಎದುರುದಾರರು ಸರ್ಕಾರಿ ಸೇವೆಗೆ ಸೇರಿದ ನಂತರ ಪಡೆದುಕೊಂಡಿದ್ದಾರೆ. ಸದರಿ ವಿಮಾ ಖರೀದಿಗಳ ವಿವರಗಳನ್ನು ಖರೀದಿಯ ಆಯಾಯ ಸಾಲಿನಲ್ಲಿ ಸೂಚಿತ ಪ್ರಾಧಿಕಾರಕ್ಕೆ ವರದಿಸಿದ ದಾಖಲೆಗಳಿಲ್ಲ. ಅವುಗಳ ಬಾಬ್ತು ಒಟ್ಟು ₹2,18,338/–ಗಳ ಮಾಸಿಕ ಕಂತನ್ನು 2018ರಲ್ಲಿ ಭರಿಸಿದ್ದಾರೆ. ಅವರ ವೇತನದಿಂದ ₹1,99,449/–ಗಳ ಮೊತ್ತವನ್ನು ಕಟಾಯಿಸಿರುವುದು ಕಂಡು ಬಂದಿದೆ. ಉಳಿದ ಮೊತ್ತವನ್ನು ವಿಮಾ ಕಂಪನಿಗೆ ಪಾವತಿ ಮಾಡಲು ಅವರ ಬಳಿಯಿದ್ದ ಆದಾಯದ ಮೂಲದ ಬಗ್ಗೆ ದಾಖಲೆಗಳಿಲ್ಲ;

BGm/3236/19



13) ಸಂಬಂಧಿಗಳಾದ ಶ್ರೀ.ಶಿವಪ್ಪ ಸವೂರು ರವರಿಂದ 2018ರಲ್ಲಿ ₹1 ಲಕ್ಷ ಕೈಸಾಲ ಪಡೆದಿರುವುದಾಗಿ ಎದುರುದಾರರು ತಮ್ಮ ಆಸ್ತಿ–ಧಾಯಿತ್ವ ಪಟ್ಟಿಯ "ಹೊಣೆಗಳು" ಖಂಡಿಕೆಯಲ್ಲಿ ಘೋಷಿಸಿಕೊಂಡಿದ್ದು, ಸದರಿ ಸಾಲ ಪಡೆಯುವ ಪೂರ್ವದಲ್ಲಿ ಸೂಚಿತ ಪ್ರಾಧಿಕಾರದಿಂದ ಅನುಮತಿ ಪಡೆದ ದಾಖಲೆಗಳಿಲ್ಲ;

7. ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ನಿಯಮ 14, 21 ಮತ್ತು 23ಗಳನ್ನು ಉಲ್ಲಂಘಿಸಿ, ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಸದರಿಯವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ. ಕಾರಣ, ಸದರಿಯವರ ದುರ್ನಡತೆಗೆ ಸಂಬಂಧಿಸಿದಂತೆ, ಇಲಾಖಾ ವಿಚಾರಣೆ ನಡೆಸುವುದು ಅವಶ್ಯವಾಗಿದೆ.

8. ಆದ್ದರಿಂದ, ಎದುರುದಾರರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anandh 26/5

(ನ್ಯಾಯಾಮೂರ್ತಿ ಎನ್.ಆನಂದ)
**ಉಪಲೋಕಾಯುಕ್ತ–1,**
**ಕರ್ನಾಟಕ ರಾಜ್ಯ.**

26/5